# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತ
# ಬೆರಳತುದಿಯಲ್ಲಿ ಆಡಳಿತ: ಕ್ಷಣಮಾತ್ರದಲ್ಲಿ ಪ್ರಗತಿ ವರದಿ

ಮಾಹಿತಿ–ತಂತ್ರಜ್ಞಾನವನ್ನು ಎಲ್ಲಾ ಹಂತಗಳಲ್ಲೂ ಅಳವಡಿಸಿಕೊಂಡು ಆಡಳಿತ ಸುಧಾರಣೆಗೆ ಮಹತ್ವದ ಹೆಜ್ಜೆಯನ್ನು ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಇಟ್ಟಿದೆ. ಇದರಿಂದ ಬೆರಳತುದಿಯಲ್ಲಿ ಆಡಳಿತ ಪರಿಕಲ್ಪನೆ ಅಕ್ಷರಶಃ ಜಾರಿಗೆ ಬಂದಿದೆ.

ಫಲಾನುಭವಿಗಳು ಅರ್ಜಿ ಹಿಡಿದುಕೊಂಡು ಜಿಲ್ಲಾ ಕಛೇರಿ ಹಾಗೂ ಕೇಂದ್ರ ಕಚೇರಿಗಳಿಗೆ ಎಡತಾಕುವುದನ್ನು, ತಮ್ಮ ಅರ್ಜಿಗಳ ಗತಿ ಏನಾಗಿವೆ ಎಂಬ ಮಾಹಿತಿ ಪಡೆಯಲು ಮೇಲಿಂದ ಮೇಲೆ ಕಚೇರಿಗೆ ಅಲೆದಾಡುವುದನ್ನು ತಪ್ಪಿಸುವ ಮಹತ್ವದ ಉದ್ದೇಶ ಈಡೇರಿಸಲಾಗಿದೆ.

ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದ ಆರಂಭದ ದಿನಗಳಲ್ಲೇ **ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟು ಉಪಯೋಜನೆ (ಎಸ್‌ಸಿಪಿ–ಟಿಎಸ್‌ಪಿ) ವಿಧೇಯಕಕ್ಕೆ** ತಿದ್ದುಪಡಿ ತಂದು ಯೋಜನೆಗಳನ್ನು ಆಯಾ ವರ್ಷವೇ ಜಾರಿಗೊಳಿಸುವುದನ್ನು ಕಡ್ಡಾಯಗೊಳಿಸಲಾಯಿತು.

ಜೊತೆಗೆ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಯೋಜನಾ ವೆಚ್ಚವನ್ನು ಒಟ್ಟಾರೆ ಶೇ18 ರಿಂದ ಶೇ24.10ಕ್ಕೆ (17.15 ಪ.ಜಾತಿ + 6.95 ಪ. ಬುಡಕಟ್ಟು) ಹೆಚ್ಚಿಸಲಾಯಿತು ಇದರಿಂದ ಪರಿಶಿಷ್ಟಜಾತಿ ಹಾಗೂ ವರ್ಗಗಳ ಕಲ್ಯಾಣಕ್ಕೆ ಸರ್ಕಾರ ವಾರ್ಷಿಕವಾಗಿ ವಿನಿಯೋಗಿಸುವ ವೆಚ್ಚದ ಪ್ರಮಾಣ ದ್ವಿಗುಣಗೊಂಡಿತು. ಈ ಕಾಯ್ದೆ ಜಾರಿಗೆ ಮುನ್ನಾ ವಾರ್ಷಿಕ ಸರಾಸರಿ 8616 ಕೋಟಿ ಇದ್ದ ಆಯವ್ಯಯ ಮರುವರ್ಷವೇ 15834 ಕೋಟಿಗೆ ಜಿಗಿಯಿತು.
ಇದರ ಪರಿಣಾಮವಾಗಿ ಯೋಜನೆಗಳ ಮಂಜೂರಾತಿ ಪ್ರಮಾಣ ಕೂಡ ಇಮ್ಮಡಿಗೊಂಡಿತು. ಫಲಾನುಭವಿಗಳ ಸಂಖ್ಯೆಯೂ ದುಪ್ಪಟ್ಟಾಯಿತು. ಇಂತಹ ದಿಢೀರ್ ಬೆಳವಣಿಗೆಯ ನಡುವೆ ನಿಗಮದಲ್ಲಿ ಕಂಪ್ಯೂಟರೀಕರಣ ಹಾಗೂ ಮಾಹಿತಿ ತಂತ್ರಜ್ಞಾನದ ಅಳವಡಿಕೆಯನ್ನು ಶರವೇಗದಲ್ಲಿ ಕೈಗೊಳ್ಳಲಾಯಿತು.

### ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತ, ಬೆಂಗಳೂರು.
### "ಐದು ವರ್ಷಗಳ ಪ್ರಗತಿ"

- ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮಕ್ಕೆ ಪರಿಶಿಷ್ಟ ಜಾತಿಯವರ ಅಭಿವೃದ್ದಿಗಾಗಿ ಕಳೆದ 5 ವರ್ಷಗಳಲ್ಲಿ ಸರ್ಕಾರವು ಆಯವ್ಯಯದಲ್ಲಿ **ರೂ.2643.90 ಕೋಟಿಗಳು ನಿಗದಿಪಡಿಸಿದ್ದು 334709** ಫಲಾಪೇಕ್ಷಿಗಳಿಗೆ ಸಾಲ ಸೌಲಭ್ಯ ಕಲ್ಪಿಸಲು ಗುರಿ ಹಮ್ಮಿಕೊಳ್ಳಲಾಗಿತ್ತು. **ನವೆಂಬರ್–2017ರ ಅಂತ್ಯದವರೆಗೆ** ನಿಗಮದ ಸಾಲ ಸೌಲಭ್ಯವು ಸೇರಿ ಒಟ್ಟು **ರೂ.2185.85 ಕೋಟಿಗಳನ್ನು ವೆಚ್ಚ ಮಾಡಿ 198281 ಫಲಾನುಭವಿಗಳಿಗೆ** ಸೌಲಭ್ಯ ಕಲ್ಪಿಸಲಾಗಿದೆ.
- **ಸ್ವಯಂ ಉದ್ಯೋಗ ಯೋಜನೆಯಡಿ** ಪರಿಶಿಷ್ಟ ಜಾತಿಯ 83474 ಫಲಾನುಭವಿಗಳಿಗೆ ಸೌಲಭ್ಯವನ್ನು ಕಲ್ಪಿಸಿ **ರೂ.733.24 ಕೋಟಿಗಳನ್ನು** ವೆಚ್ಚ ಮಾಡಲಾಗಿದೆ.
- **ಭೂ ಒಡೆತನ ಯೋಜನೆಯಡಿ** ಪರಿಶಿಷ್ಟ ಜಾತಿಯ 4125 ಭೂ ರಹಿತ ಕೃಷಿ ಕಾರ್ಮಿಕ ಮಹಿಳಾ ಫಲಾನುಭವಿಗಳಿಗೆ **5544.27** ಎಕರೆ ಜಮೀನನ್ನು ಖರೀದಿಸಿ ಭೂ ಒಡೆಯರನ್ನಾಗಿ ಮಾಡಲು ರೂ.260.16 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
- **ಗಂಗಾ ಕಲ್ಯಾಣ ಯೋಜನೆಯಡಿ** ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತೀ ಸಣ್ಣ ರೈತರುಗಳ ಜಮೀನುಗಳಲ್ಲಿ ವೈಯಕ್ತಿಕ ಕೊಳವೆಬಾವಿಗಳನ್ನು ನಿರ್ಮಿಸಲು , **ರೂ.1035.69** ಕೋಟಿಗಳ ಅನುದಾನವನ್ನು ನಿಗದಿಪಡಿಸಿದ್ದು, ಈ ಪೈಕಿ 35272 ಕೊಳವೆ ಬಾವಿಗಳನ್ನು ಕೊರೆದು 26949 ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಅಳವಡಿಸಿ 31204 ಕೊಳವೆ ಬಾವಿಗಳನ್ನು (ಹಿಂಬಾಕಿ ಗುರಿಯ ಕೊಳವೆ ಬಾವಿಗಳು ಸೇರಿ) ವಿದ್ಯುದ್ದೀಕರಣಗೊಳಿಸಲಾಗಿದೆ.ಸದರಿ ಯೋಜನೆಯಡಿ ಒಟ್ಟು ರೂ.721.09ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

- **ಗಂಗಾ ಕಲ್ಯಾಣ- ಏತ ನೀರಾವರಿ ಯೋಜನೆಯಡಿ 999 ಘಟಕಗಳಲ್ಲಿ 4301** ಫಲಾನುಭವಿಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಗುರಿ ನಿಗಧಿಪಡಿಸಿದ್ದು, ಈ ಪೈಕಿ **2570** ಫಲಾನುಭವಿಗಳಿಗೆ **ರೂ.19.90 ಕೋಟಿಗಳನ್ನು** ವೆಚ್ಚ ಮಾಡಲಾಗಿದೆ.
- **ಮೈಕ್ರೋ ಕ್ರೆಡಿಟ್ (ಕಿರುಸಾಲ) ಯೋಜನೆಯಡಿ** 90101 ಫಲಾನುಭವಿಗಳಿಗೆ ಗುರಿ ನಿಗಧಿಪಡಿಸಿದ್ದು, ಈ ಪೈಕಿ 75098 ಫಲಾನುಭವಿಗಳಿಗೆ **ರೂ.108.16 ಕೋಟಿಗಳನ್ನು** ವೆಚ್ಚ ಮಾಡಿ ಸೌಲಭ್ಯ ಕಲ್ಪಿಸಲಾಗಿದೆ.
- ಹಿಂದೆಂದೂ ಮಾಡಿರದಂತಹ ರೀತಿಯಲ್ಲಿ 05 ವರ್ಷಗಳಲ್ಲಿ ನಿಗಮಕ್ಕೆ ರೂ.2569.33ಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.
- **2017-18ನೇ ಸಾಲಿನಲ್ಲಿ 03 ಹೊಸ ಯೋಜನೆಗಳು:** ವೃತ್ತಿ ಕೌಶಲ್ಯ ಪಡೆದ 1400 ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕರಿಗೆ 5 ಲಕ್ಷ ರೂ.ಗಳವರೆಗಿನ ಘಟಕ ವೆಚ್ಚವನ್ನು ಹೊಂದಿರುವ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು 2.5 ಲಕ್ಷ ರೂ. ಹಾಗೂ 2.5ಲಕ್ಷ ಬ್ಯಾಂಕ್ ಸಾಲದೊಂದಿಗೆ ಅನುಷ್ಠಾನಮಾಡಲಾಗುವುದು.
- ವಾಹನ ಚಾಲನಾ ಪರವಾನಗಿ ಹೊಂದಿರುವ 3500 ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿಗಳನ್ನು ಖರೀದಿಸಲು 3 ಲಕ್ಷ ರೂ.ಗಳವರೆಗೆ, ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಬಹುದು.
- ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 70000 ಪರಿಶಿಷ್ಟ ಜಾತಿ ರೈತರ ಆರ್ಥಿಕಾಭಿವೃದ್ಧಿಗಾಗಿ ರೂ.40,000 ಘಟಕ ವೆಚ್ಚದಲ್ಲಿ ನೇರ ಸಾಲ ಯೋಜನೆಯಡಿ ಎಮ್ಮೆ-ಹಸು ಅಥವಾ ಕುರಿ-ಮೇಕೆ ಇವುಗಳನ್ನು ವಿತರಿಸಲು ರೂ.300 ಕೋಟಿ ಒದಗಿಸಲಾಗಿದೆ.

# "ಸರಳ" ಫಲಾನುಭವಿಯ ಆಧಾರ್ ಸಂಖ್ಯೆ ಜೋಡಿಸಿದ ಅಂತರ್ಜಾಲ ವಹಿವಾಟು:




ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅಂತರ್ಜಾಲ ಮಾದ್ಯಮವನ್ನು ಬಳಸಿಕೊಂಡು ನಿಗಮದ ಕಾರ್ಯಾವೈಕರಿಗೆ ಹೊಸ ಸ್ವರೂಪ ಹಾಗೂ ವೇಗವನ್ನು ನೀಡುವ ಜೊತೆಗೆ ಯೋಜನೆಗಳ ಅನುಷ್ಠಾನದಲ್ಲಿ ಆಗುತಿರುವ ಅನಗತ್ಯ ವಿಳಂಬವನ್ನು ತಪ್ಪಿಸಲು ಕ್ರಮ ಕೈಗೊಂಡಿದೆ. ಇದರಿಂದ ಯೋಜನೆಗಳ ಮಂಜೂರಾತಿ, ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮಾವಣೆ ಹಾಗೂ ಫಲಾನುಭವಿಗಳಿಗೆ ಎಲ್ಲಾ ಹಂತದಲ್ಲೂ ಮಾಹಿತಿ ನೀಡುವ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಕ್ರಮದಿಂದ ಯೋಜನೆಗಳ ಮಂಜೂರಾತಿ, ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮಾವಣೆ ಹಾಗೂ ಫಲಾನುಭವಿಗಳಿಗೆ ಎಲ್ಲಾ ಹಂತದಲ್ಲೂ ಮಾಹಿತಿ ನೀಡುವ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಹಾಗೂ ಇಲಾಖೆಯ ಯೋಜನೆಗಳ ಲಾಭವನ್ನು ಪಡೆದವರೆ ಪಡೆಯುವುದನ್ನು ತಪ್ಪಿಸಲು ಫಲಾನುಭವಿಯ ಆಧಾರ್‌ಸಂಖ್ಯೆಯನ್ನು ಮಂಜೂರಾದ ಯೋಜನೆಗಳಿಗೆ ಜೊಡಿಸುವ ಪ್ರಕ್ರಿಯೆ ಆರಂಭಮಾಡಲಾಗಿದೆ.




ಇದುವರೆಗಿನ ವ್ಯವಸ್ಥೆಯಲ್ಲಿ ನಿಗಮದ ಯೋಜನೆಗಳ ಫಲಾನುಭವಿಗಳು ಶಾಸಕರ ಕಛೇರಿ, ಜಿಲ್ಲಾ ಕಛೇರಿ, ಬ್ಯಾಂಕ್ ಹಾಗೂ ಕೇಂದ್ರ ಕಛೇರಿಗೆ ಪದೇ ಪದೇ ಅಲೆದಾಡಬೇಕಾದ ಸ್ಥಿತಿಇದೆ ಇದರಿಂದ ಫಲಾಪೇಕ್ಷಿಗೆ ಸಾಕಷ್ಟು ತೊಂದರೆ ಹಾಗೂ ವಿಳಂಬ ಆಗುತ್ತಿದೆ. ಇದನ್ನು ತಪ್ಪಿಸಲು ಆನ್‌ಲೈನ್ ವ್ಯವಸ್ಥೆಯ ಪಾರದರ್ಶಕ ಮಾಹಿತಿ ನೀಡುವ ಕ್ರಮಕೈಗೊಳ್ಳಲಾಗಿದೆ. ಜಿಲ್ಲಾ ಕಚೇರಿಗಳ ಯೋಜನೆಗಳ ಅನುಷ್ಠಾನ ಮಾಹಿತಿಯನ್ನು ಕಂಪ್ಯೂಟರಿಕರಣ ಗೊಳಿಸಿರುವುದರಿಂದ ಪ್ರಗತಿ ಪರಿಶೀಲನೆ ಹಾಗೂ ತ್ವರಿತ ಅನುಷ್ಠಾನಕ್ಕೆ ನೆರವಾಗುತ್ತದೆ.




ಬ್ಯಾಂಕಿನಿಂದ ಸಾಲ ಮಂಜೂರು ಮಾಡುವ ಪ್ರಕ್ರಿಯೆಯಲ್ಲಿ ಯಾವ ಬ್ಯಾಂಕಿನಲ್ಲಿ ಎಷ್ಟು ದಿನ ಸಾಲ ಮಂಜೂರು ಮಾಡಲು ತಡವಾಗಿದೆ ಮತ್ತು ಏಕೆ ಸಾಲ ಮಂಜೂರು ಮಾಡಿಲ್ಲ ಎಂಬ ಮಾಹಿತಿಯು ಈಗ ಲಭ್ಯವಿರುವುದಿಲ್ಲ. ಆನ್‌ಲೈನ್ ವ್ಯವಸ್ಥೆ ಜಾರಿಗೋಳಿಸುವುದರಿಂದ ಈ ಎಲ್ಲಾ ಮಾಹಿತಿ ಲಭ್ಯವಾಗಿ ಆಡಳಿತ ಸುಧಾರಣೆಗೆ ನೆರವಾಗುತ್ತದೆ.

ಶಾಸಕರು ಆಯ್ಕೆ ಮಾಡಿದ ಫಲಾಪೇಕ್ಷಿಗಳಿಂದ ಜಿಲ್ಲಾ ವ್ಯವಸ್ಥಾಪಕರು, ಹೆಸರು, ವಿಳಾಸ, ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಬ್ಯಾಂಕಿನ ಐ.ಎಫ್.ಎಸ್.ಸಿ ಕೋಡ್‌ಗಳನ್ನು ಪಡೆದು, ಫಲಾಪೇಕ್ಷಿಯ ಅರ್ಹತೆಯನ್ನು ಪರಿಶೀಲಿಸಿ ಆನ್‌ಲೈನ್ ಮುಖಾಂತರ ಫಲಾಪೇಕ್ಷಿಗಳ ಸಹಾಯಧನದ ಮಾಹಿತಿಯನ್ನು ಅವರ ಡಾಂಗಲ್ ಮೂಲಕ ಕೇಂದ್ರ ಕಚೇರಿಗೆ ಅಪ್‌ಲೋಡ್ ಮಾಡುವುದು.

ಕೇಂದ್ರ ಕಚೇರಿಯಲ್ಲಿ ಮಾಹಿತಿಯನ್ನು ಪರಿಶೀಲನೆ ಮಾಡಿ, ಹಣ ಬಿಡುಗಡೆಗೆ ಶಿಫಾರಸ್ಸು ಮಾಡಿ ಕೇಂದ್ರ ಬ್ಯಾಂಕ್ ಆನ್‌ಲೈನ್ ಮೂಲಕ ಕಳುಹಿಸಿ, ಬ್ಯಾಂಕ್‌ಗಳು ಆಧಾರ್ ನಂಬರ್ ಮೂಲಕ ಅರ್ಜಿದಾರರ ಸೀಡಿಂಗ್ ಪರಿಶೀಲಿಸಿ 24 ಗಂಟೆಗಳೊಳಗೆ ಅರ್ಜಿದಾರರಿಗೆ ಹಾಗೂ ಸಂಬಂಧ ಪಟ್ಟ ಬ್ಯಾಂಕಿಗೆ ಹಣ ಪಾವತಿ ಮಾಡಲಾಗುವುದು. ಹಾಗೆಯೇ ಅರ್ಜಿದಾರರಿಗೆ, ಶಾಸಕರಿಗೆ ಹಾಗೂ ಜಿಲ್ಲಾ ವ್ಯವಸ್ಥಾಪಕರುಗಳಿಗೆ ಎಸ್.ಎಂ.ಎಸ್ ಮೂಲಕ ಹಣ ರವಾನೆ ಆದ ಬಗ್ಗೆ ಮಾಹಿತಿ ನೀಡಲಾಗುವುದು.






# "ಸ್ಪಂದನೆ"

ಫಲಾನುಭವಿಗಳು ದೂರದ ಊರುಗಳಿಂದ ಸಾಲಸೋಲ ಮಡಿಕೊಂಡು ಯೋಜನೆಗಳ ಮಂಜೂರಾತಿ ಮಾಹಿತಿ ತಿಳಿಯಲು ಜಿಲ್ಲಾ ಕೇಂದ್ರ ಕಚೇರಿಗಳಿಗೆ ಮೇಲಿಂದ ಮೇಲೆ ಬರುವುದನ್ನು ತಪ್ಪಿಸಲು "ಸ್ಪಂದನೆ" ಜಾರಿಗೋಳಿಸಲಾಗಿದೆ.




ಈ ವ್ಯವಸ್ಥೆಯಲ್ಲಿ ಕೇಂದ್ರ ಕಚೇರಿಗೆ ಫಲಾನುಭವಿಯ ಮೊದಲ ಭೇಟಿಯಲ್ಲೇ ಉದ್ದೇಶಿತ ಮಾಹಿತಿಗಳನ್ನು ಕಂಪ್ಯೂಟರ್‌ನಲ್ಲಿನ ನಿಗದಿತ ಮಾದರಿಗೆ ಭರ್ತಿ ಮಾಡಲಾಗುತ್ತದೆ, ಹೀಗೆ ಭರ್ತಿ ಮಾಡಿದ ಮಾಹಿತಿ ಸಂಬಂಧಪಟ್ಟ ಉನ್ನತ ಅಧಿಕಾರಿಗಳಿಗೆ ಆಗಿಂದಾಗಲೇ ರವಾನೆ ಆಗುತ್ತದೆ, ಆ ಅಧಿಕಾರಿ ಮಾಹಿತಿಯನ್ನು ಪರಿಶೀಲಿಸಿ ಸಂಬಂಧಿಸಿದ ಉತ್ತರವನ್ನು ನಿಗಡಿತ ಮಾದರಿಗೆ ಭರ್ತಿಮಾಡುತ್ತಾರೆ. ಅದು ಫಲಾನುಭವಿ ಅರ್ಜಿದಾರರಿಗೆ ಮೊಬೈಲ್ ಸಂದೇಶದ ಮೂಲಕ ರವಾನೆಯಾಗುತ್ತದೆ. ಜೊತೆಗೆ ಇಲಾಖೆಯ ಕಂಪ್ಯೂಟರ್‌ಗೆ ಜೋಡಣೆಯಾಗಿ ಅಂತಿಮವಾಗಿ ಸಮಸ್ಯೆ ಪರಿಹಾರ ಕಾಣುವಂತೆ ಮಾಡುತ್ತದೆ.




ಇದು ಅವರ ಕೆಲಸ ಎಷ್ಟುದಿನದಲ್ಲಿ ಆಗುತ್ತದೆ , ಯಾವಕಾಣದಿಂದ ವಿಳಂಬ ಆದುತ್ತಿದೆ ಎಂಬ ವಿವರಗಲನ್ನು ಅರ್ಜಿದಾರರಿಗೆ ರವಾನಿಸುವುದರಿಂದ ಆತ ಮೇಲಿಂದ ಮೇಲೆ ಕಚೇರಿಗೆ ಅಲೆದಾಡುವ ಗೊಳಿಸಲು ಸಹಕಾರಿ ಆಗಿದೆ, ಈ ಪ್ರಕ್ರಿಯೆಗೆ ಬಳಕೆ ಆಗುವ ತಂತ್ರಾಂಶಕ್ಕೆ "ಸ್ಪಂದನೆ" ಎನ್ನಲಾಗುತ್ತಿದೆ

ಈ ವ್ಯವಸ್ಥೆಯಿಂದ ನಿಗಮದ ವ್ಯವಾಸ್ಥಾಪಕ ನಿರ್ದೆಶಕರಿಗೆ ವಿವಿಧ ವಿಭಾಗಗಳಲ್ಲಿ ಬಾಕಿ ಉಳಿದಿರುವ ಕೆಲಸಗಳಬಗ್ಗೆ ಆಗಿಂದಾಗೆ ಮಾಹಿತಿ ರವಾನೆ ಅಗುವುದರಿಂದ ಅವುಗಳ ತ್ವರಿತ ವಿಲೇವಾರಿಗೆ ಕ್ರಮಕೈಗೊಳ್ಳಲು ನೆರವಾಗುತ್ತದೆ ಹಾಗೂ ಸಮರ್ಥ ನಿರ್ವಹಣೆಗೆ ಸಹಾಯಕವಾಗುತ್ತದೆ. ಅರ್ಜಿದಾರರ ದೂರುಗಳನ್ನು ಆ ಕ್ಷಣವೇ ಪರಿಶೀಲಿಸಿ ಕ್ರಮಕೈಗೊಳ್ಳುವ ಮೂಲಕ ಅವರ ಅಲೆದಾಟ ತಪ್ಪಿಸುವಂತೆ ಈ "ಸ್ಪಂದನೆ" ನೆರವಾಗಳಿದೆ.

# "ಇ–ವರದಿ"

ಯೋಜನೆಗಳ ಮಾಸಿಕ ಅನುಷ್ಠಾನ ಹಾಗೂ ಪ್ರಗತಿಯ ಮಾಹಿತಿಯನ್ನು ಜಿಲ್ಲಾಕೇಂದ್ರಗಳಿಂದ ಕೇಂದ್ರ ಕಚೇರಿಗೆ ಪ್ರತಿ ತಿಂಗಳು 5ನೇ ತಾರೀಕಿನ ಒಳಗೆ ರವಾಗಿಸುವ ಪ್ರಕ್ರಿಯೆಗೆ ಕಂಪ್ಯೂಟರ್ ಮೂಲಕ ಕಳುಹಿಸುವ ಮಾದರಿಗಳನ್ನು ರೂಪಿಸಲಾಗಿದೆ. ಇವುಗಳಲ್ಲಿ ಆ ತಿಂಗಳಿನ ಪ್ರಗತಿ ಮಾಹಿತಿಗಳನ್ನು ಭರ್ತಿಮಾಡಿದರೆ ಅದು ಆ ತಿಂಗಳವರೆಗಿನ ಒಟ್ಟಾರೆ ಪ್ರಗತಿಯನ್ನು ಕ್ರೋಢಿಕರಿಸಿದ ಅಂಕಿ ಅಂಶವನ್ನು ನೀಡುತ್ತದೆ.






ಜೊತೆಗೆ ಯೋಜನೆಯ ಗುರಿ ಹಾಗೂ ಸಾಧನೆ ಎರಡರ ಕ್ರೋಢೀಕೃತ ಅಂಕಿ ಅಂಶವನ್ನು ನೀಡುತ್ತದೆ ಹೀಗೆ 30 ಜಿಲ್ಲೆಗಳಿಂದ ಬರುವ ಮಾಹಿತಿಯನ್ನು ಒಂದೆಡೆಗೆ ಜೋಡಿಸಿದಾಗ ಸಮಗ್ರ ಚಿತ್ರಣ ಕೆಲವೇ ಸೆಕೆಂಡುಗಳಲ್ಲಿ ಲಭ್ಯವಾಗುತ್ತದೆ. ಜೊತೆಗೆ ಯಾವುದೆ ಅಧಿಕಾರಿ ಅಂಕಿ ಅಂಶಗಳನ್ನು ಮುಚ್ಚಿಡುವುದು, ಒಂದೇ ಮಾಹಿತಿಯನ್ನು ಪದೇ ಪದೇ ನೀಡುವುದನ್ನು ತಡೆಗಟ್ಟುತ್ತದೆ.

ಇದುವರೆಗಿನ ಪದ್ಧತಿಯಲ್ಲಿ ಜಿಲ್ಲೆಗಳಿಂದ ಮಾಹಿತಿಯನ್ನು ಲಿಖಿತರೂಪದಲ್ಲಿ ಇಲ್ಲವೇ ಕಂಪ್ಯೂಟರ್ ಮೂಲಕ ಪಡೆಯಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಒಂದೇ ಮಾಹಿತಿ ಎರಡೆರಡು ಸಲ ಬಂದು ಗೊಂದಲಕ್ಕೆ ಕಾರಣ ಆಗುತ್ತಿತ್ತು. ಎಲ್ಲಾ ಜಿಲ್ಲೆಗಳಲ್ಲೂ ಅಂಕಿ ಅಂಶ ಅಂತಿಮ ಗೊಳಿಸುವ ಲೆಕ್ಕಾಚಾರಕ್ಕೆ ದಿನಗಟ್ಟಲೆ ಸಮಯ ವ್ಯರ್ಥವಾಗುತ್ತಿತ್ತು. ಇ–ವರದಿ ಮಾದರಿ ಅನುಷ್ಠಾನದ ಬಳಿಕ ಇಂತಹ ವಿಳಂಬಕ್ಕೆ ತೆರೆಯೆಳೆಯಲಾಗಿದೆ. ಯಾವುದೇ ಯೋಜನೆಯ ಪ್ರಗತಿಯ ಚಿತ್ರಣ ಕ್ಷಣಮಾತ್ರದಲ್ಲಿ ಲಭ್ಯವಾಗುತ್ತಿದೆ.

ಈ ನಮೂನೆಯಲ್ಲಿ ಜಿಲ್ಲೆಗಳಿಗೆ ಹಂಚಿಕೆಯಾದ ಯೋಜನೆಗಳ ಅಂಕಿಸಂಖ್ಯೆಯ ಮಾಹಿತಿಯನ್ನು ಮೊದಲೇ ಭರ್ತಿಮಾಡಿರುವ ಕಾರಣ ಪ್ರಗತಿ ವರದಿ ಕಳುಹಿಸುವಾಗ ಜಿಲ್ಲಾಮಟ್ಟದ ಅಧಿಕಾರಿಗಳು ಕೇವಲ ಯೋಜನೆಯ ಭೌತಿಕ ಹಾಗೂ ಆರ್ಥಿಕ ಪ್ರಗತಿ ಅಂಕಿ ಅಂಶ ಭರ್ತಿ ಮಾಡಿದರೆ ಸಾಕು. ಒಟ್ಟಾರೆ ಪ್ರಗತಿಯ ಸಮಗ್ರ ಮಾಹಿತಿಯನ್ನು ಆ ತತ್ರಾಂಶವೇ ಲೆಕ್ಕಹಾಕಿಬಿಡುತ್ತದೆ. ಇದು ಹಲವು ಗೊಂದಲಗಳಿಗೆ ತೆರೆಯೆಳೆಯುವ ಕ್ಷಿಪ್ರಮಾಹಿತಿ ರವಾನೆಗೆ ಸಹಕಾರಿಯಾಗಿದೆ.

# "ಗಂಗಾಕಲ್ಯಾಣ ಇ-ವರದಿ"

ಗಂಗಾಕಲ್ಯಾನ ಯೋಜನೆ ಪ್ರಗತಿ ಮಾಹಿತಿಗೆ ರೂಪಿಸಿರುವ ಮಾದರಿಯಲ್ಲಿ ಕೊಳವೆ ಬಾವಿ ಕೊರೆಯುವ, ಪಂಪ್ ಸೆಟ್ ಸರಬರಾಜು ಮಾಡುವ, ವಿದ್ಯುತ್ ಸಂಪರ್ಕಕ್ಕೆ ಅರ್ಜಿ ನೊಂದಾಯಿಸುವ ಹಾಗೂ ವಿದ್ಯುತ್ ಸಂಪರ್ಕ ನೀಡಿದ ಮಾಹಿತಿಗಳನ್ನು ಭರ್ತಿ ಮಾಡಲಾಗುವುದು.







ಈ ತತ್ರಾಂಶಗಲ್ಲಿ ಕೊಳವೆ ಬಾವಿ ಕೊರೆದ ತಕ್ಷಣ ಆ ಗುತ್ತಿಗೆದಾರ/ಇಲಾಖೆಯ ಸಿಬ್ಬಂಧಿ ಮಾಹಿತಿ ಭರ್ತಿಮಾಡುತ್ತಾರೆ. ಅದು ಪಂಪ್ ಸೆಟ್ ಸರಬರಾಜು ಮಾಡುವವರಿಗೆ ತಕ್ಷಣ ರವಾನೆಯಾಗುತ್ತದೆ. ಪಂಪ್‌ಸೆಟ್ ಸರಬರಾಜಿನ ನಂತರ ಆಮಾಹಿತಿಯನ್ನು ಭರ್ತಿ ಮಾಡಿದ ತಕ್ಷಣ ವಿದ್ಯುತ್ ಸಂಪರ್ಕ ಕಲ್ಪಿಸುಲು ಅರ್ಜಿ ನೋಂದಾವಣೆ ವಿಭಾಗಕ್ಕೆ ರವಾನೆಯಾಗುತ್ತದೆ. ವಿದ್ಯುತ್ ಸಂಪರ್ಕ ಕಲ್ಪಿಸಿದ ಮಾಹಿತಿ ಭರ್ತಿಮಾಡಿದ ತಕ್ಷಣ ತತ್ರಾಂಶವು ಎಲ್ಲಾ ಅಂಕಿಅಂಶಗಳನ್ನು ಕ್ರೂಡಿಕರಣ ಮಾಡುತ್ತದೆ.



# "ಕಲ್ಯಾಣ ಮೊಬೈಲ್ ಆಪ್"

- ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ವಿಭಾಗಗಳ ಅನುಕೂಲಕ್ಕಾಗಿ Mobile App ಅನ್ನು ಅಭಿವೃದ್ಧಿ ಪಡಿಸಲಾಗಿದ್ದು, ಇದನ್ನು ದಿನಾಂಕ: 21.07.2017 ರಂದು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾನ್ಯ ಶ್ರೀ. ರಾಹುಲ್ ಗಾಂಧಿಯವರಿಂದ ಲೋಕಾರ್ಪಣೆಗೊಳಿಸಲಾಯಿತು.




- ಸಮಾಜ ಕಲ್ಯಾಣ ಇಲಾಖೆಯು ಅಭಿವೃದ್ಧಿ ಪಡಿಸಿರುವ Mobile App ಜನಸ್ನೇಹಿಯಾಗಿದ್ದು, ಸಾರ್ವಜನಿಕರಿಂದ ನೇರವಾಗಿ ಅರ್ಜಿಗಳನ್ನು ನೋಂದಾಯಿಸಲು ಅವಕಾಶ ಮಾಡಿಕೊಡಲಾಗಿದೆ. ಇದನ್ನು ಸರ್ಕಾರದ ಪ್ರಗತಿ ಪರವಾದ ಹೆಜ್ಜೆಯಾಗಿದ್ದು, ಇದನ್ನು ಬಳಸಿಕೊಂಡು ಅರ್ಜಿಯನ್ನು ನೋಂದಾಯಿಸುವ ಅರ್ಹರಿಗೆ ಸೌಲಭ್ಯವನ್ನು ಒದಗಿಸುವುದು ಸರ್ಕಾರದ ವಿಶೇಷ ಕೊಡುಗೆಯಾಗುತ್ತದೆ.




- Mobile App ನಲ್ಲಿ ನೇರವಾಗಿ ಅರ್ಜಿ ಸಲ್ಲಿಸಲು ಅವಕಾಶ ಮಾಡಿರುವುದರಿಂದ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅರ್ಹರಿಗೆ ಸೌಲಭ್ಯ ಒದಗಿಸುವ ಮೂಲಕ ಇ-ಆಡಳಿತಕ್ಕೆ ಮತ್ತು ಪಾರದರ್ಶಕ ಆಡಳಿತಕ್ಕೆ ಹೆಚ್ಚು ಒತ್ತನ್ನು ನೀಡಬಹುದಾಗಿದೆ.